# ಸ್ವರ್ಗ ರೂಪಿಸುವಲ್ಲಿ ನಮ್ಮ ಪಾತ್ರವಿಲ್ಲವೇ?



ನಮ್ಮ ಮಕ್ಕಳಿಗೆ ಸ್ವರ್ಗದಂಥ ಸಮಾಜ ಬೇಕು ಎಂದು ಎಲ್ಲ ಪೋಷಕರೂ ಹಂಬಲಿಸುತ್ತಾರೆ. ಆದರೆ, ಅಂಥ ಸಮಾಜವನ್ನು ರೂಪಿಸುವ ಹೊಣೆಗಾರಿಯಿಂದ ದೂರವುಳಿಯುತ್ತಾರೆ.

■ ಸ್ವಯಂಪ್ರಭಾ

ಇದು ಆನ್‌ಲೈನ್ ತರಗತಿ ಮತ್ತು ಪರೀಕ್ಷೆಗಳ ಭರಾಟೆಯ ಸಮಯ. ದ್ವಿತೀಯ ಪಿಯುಸಿ, ಪದವಿ ಮತ್ತು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಪರೀಕ್ಷೆಗಳಿಗೆ ತಾಲೀಮು ನಡೆಸುತ್ತಿದ್ದಾರೆ. ಪರೀಕ್ಷೆಗಳೆಂದರೆ ಹೇಗೆ? ನೋಡದೆಯೇ ಉತ್ತರವನ್ನು ಬರೆಯುವುದೇ? ಅಂತಹ ಅವಕಾಶವೇನೂ ಇಲ್ಲ. ಇತ್ತ ಕಂಪ್ಯೂಟರಿನಲ್ಲಿ ಪರೀಕ್ಷೆಯ ಪ್ರಶ್ನೆಗಳನ್ನು ಓದುತ್ತ, ಅತ್ತ ಮೊಬೈಲ್‌ನಲ್ಲಿ ಉತ್ತರಗಳನ್ನು ಗೂಗಲ್ ಮಾಡುತ್ತ ಪರೀಕ್ಷೆ ಎಂಬ ಹಂತವನ್ನು ದಾಟುವುದಾಗಿದೆ. ಈ ಆನ್‌ಲೈನ್ ಶಿಕ್ಷಣ ವಿದ್ಯಾರ್ಥಿಗಳಲ್ಲಿ ತುಂಬುವ ಮೌಲ್ಯ ಯಾವುದು ಎನ್ನುವುದನ್ನು ಕಾದು ನೋಡಬೇಕು.

ಇತ್ತೀಚೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಕೂಡಲೇ ಪಿಯುಸಿ ಪ್ರವೇಶ ಪಡೆಯಲು ಪಾಲಕರು ಬಹಳ ಧಾವಂತದಲ್ಲಿದ್ದರು, ಪ್ರವೇಶ ದೊರೆಯುವುದೋ ಇಲ್ಲವೋ ಎನ್ನುವ ಆತಂಕದಲ್ಲಿದ್ದರು. ಮಕ್ಕಳು ಪಾಸಾಗುತ್ತಾರೆಯೇ ಎಂಬ ಆತಂಕಕ್ಕಿಂತಲೂ ಹೆಚ್ಚಾಗಿ, ಕೋವಿಡ್ ಸೋಂಕಿನ ಸಂದರ್ಭದಲ್ಲಿ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರವೇಶ ಪ್ರಕ್ರಿಯೆಗಳು ಹೇಗಪ್ಪಾ ನಡೆಯಲಿವೆ ಎಂಬ ಅಳುಕೇ ಹೆಚ್ಚಾಗಿತ್ತು. ಕೋವಿಡ್, ಲಾಕ್‌ಡೌನ್ ಮತ್ತು ಸಾಮಾಜಿಕ ಅಂತರದ ಗೌಜುಗದ್ದಲಗಳ ನಡುವೆ ಪಿಯುಸಿ ಪ್ರವೇಶ ಪ್ರಕ್ರಿಯೆಗಳು ನಿರಾತಂಕವಾಗಿ ನಡೆದವು. ಕುಂದನ್‌ನ ತಂದೆ ಕಾರು ಬಾಡಿಗೆಗೆ ಪಡೆದುಕೊಂಡು ಬೆಂಗಳೂರಿಗೆ ತೆರಳಿ, ಅಲ್ಲಿನ ಪ್ರತಿಷ್ಠಿತ ಕಾಲೇಜಿನ ಮೆಟ್ಟಿಲೇರಿದ್ದರು. ತನಗೆ ಅದೇ ಕಾಲೇಜು ಬೇಕೆಂದು, ಅದೇ ಕ್ಯಾಂಪಸ್ಸೂ ಬೇಕೆಂದು ಮಗರಾಯ ಹಟ ಹಿಡಿದಿದ್ದ. ಕುಂದನ್‌ಗೆ ಒಳ್ಳೆಯ ಉತ್ತಮ ಅಂಕಗಳೂ ಇದ್ದುದರಿಂದ, ಪ್ರತಿಷ್ಠಿತ ಕ್ಯಾಂಪಸ್ಸಿನಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ಬೇರೆ ಕಾಲೇಜುಗಳಲ್ಲಿ ಮೆರಿಟ್ ಆಧರಿತ ಸೀಟು ಸಿಗಬಹುದಾಗಿದ್ದರೂ, ಪ್ರತಿಷ್ಠಿತ ಕಾಲೇಜಿನಲ್ಲಿಯೇ ಕಲಿಯಬೇಕು ಎಂಬ ಆಸೆ ಆವನ ಅಪ್ಪನದೂ ಹೌದು. ಕಾಲೇಜು ಆಡಳಿತ ಸೂಚಿಸಿದಷ್ಟು ದೇಣಿಗೆ ಹಣ ಕೊಡಬಲ್ಲೆ ಎಂಬ ಅಪ್ಪನ ಮಾತುಗಳು, ಮಗನಲ್ಲಿಯೂ ವಿಶ್ವಾಸವನ್ನು ಮೂಡಿಸಿದ್ದವು.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಜೀವನ ಮೌಲ್ಯಗಳ ಪಾಠವೇ ಇಲ್ಲ ಎಂಬ ಆರೋಪ ಆಗಾಗ ಕೇಳಿಬರುತ್ತದೆ. ಅಂಕ ಆಧಾರಿತ ಪರೀಕ್ಷೆಯ ವ್ಯವಸ್ಥೆ, ಅಂಕಗಳ ಮೂಲಕವೇ ಎಲ್ಲವನ್ನೂ ನಿರ್ಧರಿಸುವ ಒರಟು ಪದ್ಧತಿಯ ಬಗ್ಗೆ ಎಷ್ಟೊಂದು ಟೀಕೆಗಳನ್ನು ಕೇಳುತ್ತೇವೆ. ಆದರೆ ಶಾಲೆ ಕಾಲೇಜುಗಳ ಶಿಕ್ಷಣದ ಮಾತು ಬದಿಗಿರಲಿ, ಜೀವನಮೌಲ್ಯಗಳ ಶಿಕ್ಷಣವು ಅಗತ್ಯವಿದೆ ಎಂಬ ಆಶಯವೊಂದು ಪೋಷಕರ ಅಂತರಂಗದಲ್ಲಿ ಇರಬೇಕಲ್ಲವೇ.

ಒಳ್ಳೆಯ ಸಮಾಜ ನಿರ್ಮಾಣವಾಗಬೇಕು ಎಂಬ ಆಶಯ ಪ್ರತಿಯೊಬ್ಬ ಪೋಷಕರದೂ ಆಗಿರುತ್ತದೆ. ಆದರೆ ಸ್ವರ್ಗದಂತಹ ಸುಂದರ ಸಮಾಜವನ್ನು ಯಾರಾದರೂ ಸೃಷ್ಟಿಸಿಕೊಡಲಿ, ಅದರಲ್ಲಿ ನನ್ನ ಮಗನಿಗೋ ಮಗಳಿಗೂ ಪ್ರವೇಶ ಸಿಗಲಿ ಎಂಬ ಧೋರಣೆ ಪೋಷಕರಲ್ಲಿ ಇರುತ್ತದೆಯೇ ಹೊರತು, ಸುಂದರ ಸಮಾಜ ನಿರ್ಮಾಣಕ್ಕಾಗಿ ನಾನೂ ಶ್ರಮಿಸುತ್ತೇನೆ ಎಂಬ ಕ್ರಿಯಾಶೀಲತೆ ಇರುವವರು ಬಹಳ ಕಡಿಮೆ. ಹೇಗಾದರೂ ಸರಿ, ಯಶಸ್ಸಿನ ಬೆನ್ನೇರುವ ಕೌಶಲವನ್ನು ಮಕ್ಕಳು ಕಲಿತರೆ ಸಾಕಪ್ಪಾ ಎಂಬ ಧೋರಣೆಯೇ ಹೆಚ್ಚಿನ ಪೋಷಕರಲ್ಲಿ ಇರುತ್ತದೆ.

‘ಮಗಳೇ, ಫೇಲಾದರೂ ಪರವಾಗಿಲ್ಲ. ಚೀಟಿ ನೋಡಿ ಬರೀಬೇಡ. ಅದು ಬಹಳ ಕೆಟ್ಟ ಬುದ್ಧಿ. ಫೇಲಾಗದಂತೆ ದಿನವೂ ಹೆಚ್ಚು ಓದು... ನಿನ್ನಿಂದ ಎಷ್ಟು ಸಾಧ್ಯವೋ ಅಷ್ಟು ಅಂಕ ತೆಗೆದರೆ ಸಾಕು. ನಾನೇನೂ ನಿನಗೆ ರ್‍ಯಾಂಕ್ ತೆಗೆಯುವಂತೆ ಒತ್ತಾಯಿಸುವುದಿಲ್ಲ.’ ಹೀಗೆಂದು ಓರ್ವ ತಾಯಿ ತನ್ನ ಮಗಳಿಗೆ ಹೇಳಿದಾಗ, ಆ ಮಗಳು ಹೇಳಿದ್ದು: ‘ನಮ್ಮ ಬೆಂಚ್‌ನ ಎಲ್ಲರೂ ಚೀಟಿ ನೋಡಿಯೇ ಬರೆದರು. ಅಲ್ಲಿಯೇ ಇದ್ದ ಟೀಚರ್ ಸಹ ನೋಡಿಯೂ ನೋಡದವರಂತೆ ಹೋದರು. ಈಗ ನೋಡು, ಅವರೆಲ್ಲರೂ ಶೇ 70ಕ್ಕಿಂತಲೂ ಹೆಚ್ಚು ಅಂಕ ಪಡೆಯುತ್ತಾರೆ. ಎಲ್ಲರಿಗಿಂತ ಕಡಿಮೆ ಅಂಕ ನನಗೇ ಅಲ್ವಾ?’

‘ಇರ್ಲಿ ಬಿಡು, ಅದು ನಿನ್ನ ಸ್ವಂತ ಅಂಕ ಅಲ್ವ. ಖುಷಿಪಡು’ ಎನ್ನುವ ಅಮ್ಮನ ಸಮಜಾಯಿಷಿಗೆ ಮಗಳು ಸಿಡುಕಿದಳು: ‘ನೀ ಹೀಗೇ ಹೇಳ್ತಾ ಇರು. ಈಗಾಗಲೇ ಎಲ್ಲರೂ ನನ್ನನ್ನು ಬರೀ ಎಂಕೆಸಿ (ಮಾ ಕಾ ಚಮ್‌ಚಾ) ಅಂತ ಹಂಗಿಸ್ತಾ ಇದ್ದಾರೆ. ನೀನು ಹೇಳಿದ್ದನ್ನು ಕೇಳುತ್ತ ಕುಳಿತರೆ ಅಷ್ಟೇ ನೋಡು.’

ಮಗಳಿಗೆ ಪ್ರತಿಕ್ರಿಯಿಸಲು ಅಮ್ಮನಿಗೆ ಉತ್ತರ ಹೊಳೆಯಲಿಲ್ಲ. ಮಕ್ಕಳು ತಪ್ಪು ಮಾಡುತ್ತಿದ್ದಾರೆ ಎಂದರೆ, ದೊಡ್ಡವರೂ ತಪ್ಪು ಮಾಡುತ್ತಿದ್ದಾರೆ ಎಂದರ್ಥ. ಹಾಗಾದರೆ ಶಿಕ್ಷಣ ಬೇಕಾಗಿರುವುದು ಯಾರಿಗೆ?

‘ಕಾಲ ಬದಲಾಗಿದೆ. ಈಗಿನ ಮಕ್ಕಳಲ್ಲಿ ವಿನಯವಿಲ್ಲ, ಶ್ರದ್ಧೆ ಇಲ್ಲ’ ಎಂದೆಲ್ಲ ಟೀಕಿಸುತ್ತ, ಭಾಷಣ ಉಪನ್ಯಾಸಗಳನ್ನು ನೀಡಲು ನಿಜಕ್ಕೂ ದೊಡ್ಡವರಿಗೆ ಅರ್ಹತೆ ಇದೆ ಎನ್ನುವಿರಾ? ■